# National
# Kannada
# 19.01.2025 13.10 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಸಂವಿಧಾನ ರಚನಾಕಾರರ ಚಿಂತನೆಗಳಿಂದ ಸ್ಫೂರ್ತಿ ಪಡೆದು, ಶ್ರೇಷ್ಠ ಭಾರತ ನಿರ್ಮಾಣದೆಡೆಗೆ ಕಾರ್ಯಪ್ರವೃತ್ತರಾಗಲು ದೇಶವಾಸಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಕರೆ
2. ಎನ್‌ಡಿಆರ್‌ಎಫ್ ಸಂಸ್ಥಾಪನಾ ದಿನಾಚರಣೆ: ಎಲ್ಲ ಸಿಬ್ಬಂದಿಗೆ ಶುಭಾಶಯ ಕೋರಿದ ಅಮಿತ್ ಶಾ
3. ಗಾಜಾದಲ್ಲಿ ಇಸ್ರೇಲ್–ಹಮಾಸ್ ನಡುವಿನ ಕದನ ವಿರಾಮ ಒಪ್ಪಂದ ಇಂದು ಜಾರಿಯಾಗುವ ಸಾಧ್ಯತೆ
4. 19 ವರ್ಷದೊಳಗಿನವರ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್: ಇಂದು ಭಾರತ–ವೆಸ್ಟ್ ಇಂಡಿಸ್ ಸೆಣಸು.

*****************

ಸಂವಿಧಾನ ರಚನಾಕಾರರ ಚಿಂತನೆಗಳಿಂದ ಸ್ಫೂರ್ತಿ ಪಡೆದು, ಶ್ರೇಷ್ಠ ಭಾರತ ನಿರ್ಮಾಣದೆಡೆಗೆ ಕಾರ್ಯಪ್ರವೃತ್ತರಾಗಲು ದೇಶವಾಸಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಇಂದು ತಮ್ಮ ಮಾಸಿಕ ಮನ್ ಕಿ ಬಾತ್ ಕಾರ್ಯಕ್ರಮದ 118ನೇ ಆವೃತ್ತಿಯಲ್ಲಿ ದೇಶ–ವಿದೇಶಗಳಲ್ಲಿರುವ ಭಾರತೀಯರನ್ನುದ್ದೇಶಿಸಿ ಮಾತನಾಡಿದ ಅವರು, ಸಂವಿಧಾನ ಜಾರಿಗೊಂಡ ಸ್ಮರಣಾರ್ಥ ಆಚರಿಸಲಾಗುವ ಗಣರಾಜ್ಯೋತ್ಸವ ದಿನದ 75ನೇ ವರ್ಷಾಚರಣೆಯ ಶುಭಾಶಯ ಕೋರಿದರು.

ಮೊದಲಿಗೆ, ಇದೇ 26 ಭಾನುವಾರದಂದು ಗಣರಾಜ್ಯೋತ್ಸವ ದಿನಾಚರಣೆ ಹಿನ್ನೆಲೆ, ಪ್ರತಿ ಬಾರಿ ತಿಂಗಳ ಕೊನೆಯ ಭಾನುವಾರದಂದು ಪ್ರಸಾರವಾಗುವ 'ಮನದ ಮಾತು' ಕಾರ್ಯಕ್ರಮ ಈ ಬಾರಿ 3ನೇ ಭಾನುವಾರದಂದು ಪ್ರಸಾರವಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಇದು ಭಾರತೀಯ ಗಣರಾಜ್ಯೋತ್ಸವದ 75 ನೇ ವರ್ಷಾಚರಣೆಯಾಗಿದೆ ಎಂದ ಅವರು, ಪವಿತ್ರ ಸಂವಿಧಾನವನ್ನು ನೀಡಿದ ಸಂವಿಧಾನ ರಚನಾ ಸಭೆಯ ಎಲ್ಲ ಮಹನೀಯರಿಗೆ ವಂದಿಸಿದರು.

________ಧ್ವನಿ______ ಪ್ರಧಾನಿ ನರೇಂದ್ರ ಮೋದಿ – (ಗಣರಾಜ್ಯೋತ್ಸವ)

ಬಳಿಕ ಅವರು, ಸಂವಿಧಾನ ರಚನೆಯಲ್ಲಿ ಮಹತ್ತರ ಪಾತ್ರವಹಿಸಿದ್ದ ಡಾ॥ ಬಿ.ಆರ್.ಅಂಬೇಡ್ಕರ್, ರಚನಾ ಸಭೆಯ ಮುಖ್ಯಸ್ಥರಾಗಿದ್ದ ಡಾ. ರಾಜೇಂದ್ರ ಪ್ರಸಾದ್, ಹಾಗೂ ಭಾರತೀಯ ಜನಸಂಘ ಪಕ್ಷದ ಸಂಸ್ಥಾಪಕ ಡಾ.ಶ್ಯಾಮ ಪ್ರಸಾದ್ ಮುಖರ್ಜಿಯವರ ಧ್ವನಿ ಮುದ್ರಣಗಳನ್ನು ದೇಶವಾಸಿಗಳಿಗೆ ಕೇಳಿಸಿ, ಅವರ ಸ್ಫೂರ್ತಿದಾಯಕ ಚಿಂತನೆಗಳನ್ನು ಅನಾವರಣಗೊಳಿಸಿದರು.

ನಂತರ ಅವರು, 'ಭಾರತೀಯ ಚುನಾವಣಾ ಆಯೋಗ' ಸ್ಥಾಪನಾ ದಿನದ ಸ್ಮರಣಾರ್ಥ ಆಚರಿಸಲಾಗುವ ರಾಷ್ಟ್ರೀಯ ಮತದಾರರ ದಿನದ ಕುರಿತು ಪ್ರಸ್ತಾಪಿಸಿ, ಭಾರತ ಪ್ರಜಾಪ್ರಭುತ್ವದ ತಾಯಿಯಾಗಿದ್ದು, ಪ್ರಜಾಪ್ರಭುತ್ವದಲ್ಲಿ ಜನರ ಭಾಗವಹಿಸುವಿಕೆಗೆ ಬಹು ದೊಡ್ಡ ಸ್ಥಾನ ನೀಡಲಾಗಿದೆ ಎಂದರು.

ತಂತ್ರಜ್ಞಾನ ಬಳಕೆಯೊಂದಿಗೆ ನ್ಯಾಯಯುತ ಚುನಾವಣೆಗಳನ್ನು ನಡೆಸುತ್ತಿರುವ ಭಾರತದ ಚುನಾವಣಾ ಆಯೋಗವನ್ನು ಅವರು ಅಭಿನಂದಿಸಿದರು.

ಪ್ರಯಾಗರಾಜ್ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳ ಏಕತೆಯ ಮಹಾಕುಂಭವಾಗಿದೆ. ಈ ಉತ್ಸವ ವಿವಿಧತೆಯಲ್ಲಿ ಏಕತೆಯನ್ನು ಆಚರಿಸುತ್ತಿದೆ. ಈ ಬಾರಿ ಕುಂಭದಲ್ಲಿ ಯುವಕರ ಪಾಲ್ಗೊಳ್ಳುವಿಕೆ ಬಹಳ ವ್ಯಾಪಕವಾಗಿದೆ ಯುವಕರು ಮೂಲ ಪಾರಂಪರಿಕ ಆಚರಣೆಗಳಲ್ಲಿ ಪಾಲ್ಗೊಂಡರೆ, ಅವರ ಸುವರ್ಣ ಭವಿಷ್ಯ ರೂಪುಗೊಳ್ಳುತ್ತದೆ. ಕುಂಭದ ಈ ಜಾಗತಿಕ ಜನಪ್ರಿಯತೆಯು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ವಿಷಯವಾಗಿದೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಅದ್ಭುತವಾದ 'ಗಂಗಾ ಸಾಗರ' ಜಾತ್ರೆಯ ಕುರಿತು ಪ್ರಸ್ತಾಪಿಸಿದ ಅವರು, 'ಕುಂಭ', 'ಪುಷ್ಕರಂ' ಮತ್ತು 'ಗಂಗಾ ಸಾಗರ ಮೇಳ' ದಂತಹ ಉತ್ಸವಗಳು ಸಾಮಾಜಿಕ ಸಂವಹನ, ಸಾಮರಸ್ಯ ಮತ್ತು ಏಕತೆಯನ್ನು ಹೆಚ್ಚಿಸುವ ಹಬ್ಬಗಳಾಗಿವೆ ಎಂದರು

ಬಳಿಕ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನಾ ಉತ್ಸವದ ಪ್ರಥಮ ವಾರ್ಷಿಕೋತ್ಸವ ಕುರಿತು ತಿಳಿಸಿದ ಪ್ರಧಾನಿ ತಮ್ಮ ಅಭಿವೃದ್ಧಿಯ ಪಥದಲ್ಲಿ ಸಾಗುವಾಗ ನಮ್ಮ ಪರಂಪರೆಯನ್ನು ಉಳಿಸಿಕೊಂಡು ಅದರಿಂದ ಸ್ಫೂರ್ತಿ ಪಡೆದು ಮುನ್ನಡೆಯಬೇಕು ಎಂದು ಹೇಳಿದರು.

ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿ ಅನೇಕ ಐತಿಹಾಸಿಕ ಸಾಧನೆಗಳ ಕುರಿತು ಮಾತನಾಡಿದ ಅವರು, ಕರ್ನಾಟಕದ ಬೆಂಗಳೂರು ಮೂಲದ **Pixxel,** ಭಾರತೀಯ ಬಾಹ್ಯಾಕಾಶ-ತಂತ್ರಜ್ಞಾನದ ಸ್ಟಾರ್ಟ್-ಅಪ್, ಭಾರತದ ಮೊದಲ ಖಾಸಗಿ ಉಪಗ್ರಹ ಸಮೂಹ – 'ಫೈರ್ಫ್ಲೈ' ಅನ್ನು ಯಶಸ್ವಿಯಾಗಿ ಉಡಾಯಿಸಿದ ವಿಷಯ ಹಂಚಿಕೊಂಡರು. ಈ ಸಾಧನೆಗಾಗಿ ಸಂಪೂರ್ಣ ರಾಷ್ಟ್ರದ ಪರವಾಗಿ **Pixxel** ತಂಡ, **ISRO** ಮತ್ತು **IN-SPAce** ಅನ್ನು ಅವರು ಅಭಿನಂದಿಸಿದರು.

________ಧ್ವನಿ______ ಪ್ರಧಾನಿ ನರೇಂದ್ರ ಮೋದಿ – ಪಿಕ್ಸೆಲ್

ಇನ್ನು, ಉಪಗ್ರಹಗಳ ಸ್ಪೇಸ್ ಡಾಕಿಂಗ್ ಸಾಧನೆ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ ಅವರು, ಈ ಸಾಧನೆ ಮಾಡಿದ ನಾಲ್ಕನೇ ರಾಷ್ಟ್ರ ಎಂಬ ಹೆಗ್ಗಳಿಕೆ ಭಾರತಕ್ಕೆ ಲಭಿಸಿದೆ ಎಂದು ನುಡಿದರು.

ಬಾಹ್ಯಾಕಾಶದಲ್ಲಿ ಸಸ್ಯಗಳನ್ನು ಬೆಳೆಸುವ ಮತ್ತು ಅವುಗಳನ್ನು ಜೀವಂತವಾಗಿಡುವ ಪ್ರಯತ್ನಗಳ ಭಾಗವಾಗಿ ಇಸ್ರೋ ವಿಜ್ಞಾನಿಗಳು ಅಲಸಂದೆ ಬೀಜಗಳನ್ನು ಆಯ್ದುಕೊಂಡಿದ್ದು, ಈ ಬೀಜಗಳು ಬಾಹ್ಯಾಕಾಶದಲ್ಲಿಯೇ ಮೊಳಕೆಯೊಡೆದವು ಎಂದರು. ಇದೇ ವೇಳೆ ಐಐಟಿ ಮದ್ರಾಸ್ ನಲ್ಲಿರುವ ಎಕ್ಸ್ ಟೆಮ್ ಕೇಂದ್ರದ ಕುರಿತು ತಿಳಿಸಿದರು.

ಈ ಬಾರಿಯ ಮನ್ ಕಿ ಬಾತ್ ನಲ್ಲಿ ಪ್ರಧಾನಿ ಮನುಷ್ಯರು ಮತ್ತು ಪ್ರಾಣಿಗಳ ನಡುವಿನ ಅದ್ಭುತ ಸ್ನೇಹಸಾರುವ ನಿದರ್ಶನಗಳನ್ನು ಪ್ರಸ್ತಾಪಿಸಿದರು.

ದೇಶದ ಮಹಾನ್ ವ್ಯಕ್ತಿ ಶ್ರೀಮಂತ್ ಶಂಕರ್ ದೇವ್ ಅವರ ಜನ್ಮ ಸ್ಥಳವಾದ ಅಸ್ಸಾಂನ ನೌಗಾಂವ್ ನಲ್ಲಿ ಆನೆಗಳು ಹಾಗೂ ಜನರ ನಡುವಿನ ಸಂಬಂಧದ ಕುರಿತು ತಿಳಿಸಿದರು.

ಸ್ವಾಮಿ ವಿವೇಕಾನಂದರ ಜಯಂತಿಯಂದು ನಡೆದ 'ವಿಕಸಿತ ಭಾರತ ಯುವ ಮುಖಂಡರ ಸಂವಾದ'ದಲ್ಲಿ ವಿವಿಧ ಕ್ಷೇತ್ರಗಳ ಕುರಿತು ಯುವ ಸಮುದಾಯದ ಚಿಂತನೆಗಳು ಅನಾವರಣಗೊಂಡವು.

ಸ್ಟಾರ್ಟಪ್ ಇಂಡಿಯಾ ಉಪಕ್ರಮಕ್ಕೆ **9** ವರ್ಷಗಳು ಪೂರ್ಣಗೊಂಡಿವೆ ಎಂದು ಹರ್ಷವ್ಯಕ್ತಪಡಿಸಿದ ಅವರು ಅಂಬಾಲ, ಹಿಸಾರ್, ಕಾಂಗ್ರಾ, ಚೆಂಗಲ್ಪಟ್ಟು, ಬಿಲಾಸ್ಪುರ್, ಗ್ವಾಲಿಯರ್ ಮತ್ತು ವಾಶಿಮ್ ನಂತಹ ನಗರಗಳು ನವೋದ್ಯಮಗಳ ಕೇಂದ್ರಗಳಾಗುತ್ತಿವೆ.

ಅರುಣಾಚಲ ಪ್ರದೇಶದಲ್ಲಿ ದೀಪಕ್ ನಾಬಾಮ್ ನಡೆಸುವ ಮಾನಸಿಕ ಅಸ್ವಸ್ಥರಿಗೆ, ಶಾರೀರಿಕವಾಗಿ ಅಸಮರ್ಥರಾಗಿರುವವರಿಗೆ ಮತ್ತು ವೃದ್ಧರಿಗೆ ಆರೈಕಾ ಕೇಂದ್ರ **Living-Home**, ಲಕ್ಷದ್ವೀಪದಲ್ಲಿರುವ ಕೆಜೀ ಮೊಹಮ್ಮದ್, ನಿಕೋಬಾರ್ ಜಿಲ್ಲೆಯಲ್ಲಿ ವರ್ಜಿನ್ ಕೊಬ್ಬರಿ ಎಣ್ಣೆಗೆ ದೊರೆತಿರುವ ಜಿಐ ಟ್ಯಾಗ್ ಕುರಿತು ಕೇಳುಗರಿಗೆ ಮನದ ಮಾತಿನಲ್ಲಿ ಮಾಹಿತಿ ನೀಡಿದರು.

ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿ ಸ್ಮರಣಾರ್ಥ ಆಚರಿಸಲಾಗುವ 'ಪರಾಕ್ರಮ ದಿನ' ನೇತಾಜಿ ಅವರ ಶೌರ್ಯದ ಗಾಥೆಯನ್ನು ಸಾರುತ್ತದೆ. ಅವರು ಸ್ಥಾಪಿಸಿದ್ದ, 'ಆಜಾದ್ ಹಿಂದ್ ರೇಡಿಯೋ' ದಲ್ಲಿ ಇಂಗ್ಲೀಷ್, ಹಿಂದೀ, ತಮಿಳು, ಬಂಗಾಳಿ, ಮರಾಠಿ, ಪಂಜಾಬಿ, ಪಾಷ್ತೋ ಮತ್ತು ಉರ್ದು ಭಾಷೆಯಲ್ಲಿ ವಾರ್ತಾ ಸಂಚಿಕೆಗಳು ಪ್ರಸಾರವಾಗುತ್ತಿದ್ದವು ಎಂದು ಸ್ಮರಿಸಿದರು.

*****************

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ಸ್ಥಾಪನಾ ದಿನದ ಅಂಗವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎಲ್ಲಾ ಸಿಬ್ಬಂದಿಗೆ ಶುಭಾಶಯ ಕೋರಿದ್ದಾರೆ.

ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯು ನೈಸರ್ಗಿಕ ವಿಕೋಪಗಳು ಮತ್ತು ಇತರ ಕಷ್ಟಕರ ಸಮಯಗಳಲ್ಲಿ ಪ್ರಾಣ ರಕ್ಷಣೆಯಲ್ಲಿ ಅಮೂಲ್ಯ ಕೊಡುಗೆ ನೀಡಿದೆ. ಇದು ನಾಗರಿಕರ ಸುರಕ್ಷತೆಗೆ ಸರ್ಕಾರದ ಬದ್ಧತೆಯ ಸಂಕೇತವಾಗಿದೆ' ಎಂದು ಹೇಳಿದರು.

*****************

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಆಂಧ್ರಪ್ರದೇಶದ ವಿಜಯವಾಡದಲ್ಲಿ, ರಾಷ್ಟ್ರೀಯ ವಿಪತ್ತು ಪರಿಹಾರ ದಳದ **20**ನೇ ಸಂಸ್ಥಾಪನಾ ದಿನದ ಸಮಾರಂಭದಲ್ಲಿ ಪಾಲ್ಗೊಂಡಿದ್ದಾರೆ.

ಕಾರ್ಯಕ್ರಮದಲ್ಲಿ ಅವರು ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ದಕ್ಷಿಣ ಕ್ಯಾಂಪಸ್ ಉದ್ಘಾಟಿಸಿದರು.

ಇದೇ ವೇಳೆ **200** ಕೋಟಿ ರೂಪಾಯಿಗೂ ಅಧಿಕ ಯೋಜನೆಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಮೂರು ಪ್ರಮುಖ ಕೇಂದ್ರಗಳಾದ ಎನ್‌ಡಿಆರ್‌ಎಫ್‌ನ **10**ನೇ ಬೆಟಾಲಿಯನ್ ಕೇಂದ್ರ ಮತ್ತು ಸುಪೌಲ್‌ನಲ್ಲಿ ಪ್ರಾದೇಶಿಕ ಪ್ರತಿಕ್ರಿಯಾ ಕೇಂದ್ರಗಳನ್ನು ಉದ್ಘಾಟಿಸಲಾಗುತ್ತಿದೆ.

ಹೈದರಾಬಾದ್‌ನ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ ಪ್ರೊಬೆಷನರಿ ಐಪಿಎಸ್ ಅಧಿಕಾರಿಗಳಿಗೆ ಶೂಟಿಂಗ್ ಕೌಶಲದ ತರಬೇತಿಗಾಗಿ ನಿರ್ಮಿಸಲಾಗುತ್ತಿರುವ ಇಂಟಿಗ್ರೇಟೆಡ್ ಇಂಡೋರ್ ಶೂಟಿಂಗ್ ರೇಂಜ್‌ಗೆ ಅಮಿತ್ ಶಾ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ತಮ್ಮ ಭೇಟಿಯ ವೇಳೆ ಅವರು, ತಿರುಪತಿಯಲ್ಲಿ ರಾಜ್ಯ ಸರ್ಕಾರದ ಪ್ರಾದೇಶಿಕ ವಿಧಿ ವಿಜ್ಞಾನಗಳ ಪ್ರಯೋಗಾಲಯದ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ.

*****************

ಗಾಜಾದಲ್ಲಿ ಇಸ್ರೇಲ್ ಮತ್ತು ಹಮಾಸ್ ನಡುವಿನ ಕದನ ವಿರಾಮ ಒಪ್ಪಂದ ಇಂದು ಜಾರಿಗೆ ಬರುವ ಸಾಧ್ಯತೆಯಿದೆ. ನಿನ್ನೆ ಮುಂಜಾನೆ, ಇಸ್ರೇಲ್‌ನ ಭದ್ರತಾ ಸಚಿವ ಸಂಪುಟ ಗಾಜಾ ಕದನ ವಿರಾಮ ಒಪ್ಪಂದವನ್ನು ಅನುಮೋದಿಸಿತು.

ಇದು ಇಸ್ರೇಲ್ ಜೈಲುಗಳಲ್ಲಿರುವ ಪ್ಯಾಲೆಸ್ಟೀನಿಯ ಕೈದಿಗಳಿಗಾಗಿ ಹಮಾಸ್ ಬಳಿ ಇರುವ ಒತ್ತೆಯಾಳುಗಳನ್ನು ವಿನಿಮಯ ಮಾಡಿಕೊಳ್ಳುವುದು ಮತ್ತು 15 ತಿಂಗಳ ಕಾಲದ ಸಂಘರ್ಷಕ್ಕೆ ತಾತ್ಕಾಲಿಕ ವಿರಾಮವನ್ನು ಒಳಗೊಂಡಿರುತ್ತದೆ.

ಆದರೆ ಕದನ ವಿರಾಮ ಜಾರಿಗೆ ಬರುವ ಕೆಲವೇ ಗಂಟೆಗಳ ಮೊದಲು, ಗಾಜಾ ಕದನ ವಿರಾಮ ಒಪ್ಪಂದವು ತಾತ್ಕಾಲಿಕ ಎಂದಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಗಾಜಾ ಹೋರಾಟವನ್ನು ಪುನರಾರಂಭಿಸುವ ಹಕ್ಕನ್ನು ಉಳಿಸಿಕೊಂಡಿದೆ ಎಂದಿದ್ದಾರೆ. ಇಂದು ಮೊದಲ ಹಂತದಲ್ಲಿ ಬಿಡುಗಡೆ ಮಾಡಬೇಕಾದ 33 ಒತ್ತೆಯಾಳುಗಳ ಪಟ್ಟಿಯನ್ನು ಒದಗಿಸುವಂತೆ ಅವರು ಹಮಾಸ್‌ಗೆ ಕೇಳಿದ್ದು, ಪಟ್ಟಿ ಬಿಡುಗಡೆಯಾಗದ ಹೊರತು ಕದನ ವಿರಾಮ ಜಾರಿಯಾಗುವುದಿಲ್ಲ ಎಂದು ನೆತನ್ಯಾಹು ಸ್ಪಷ್ಟಪಡಿಸಿದ್ದಾರೆ.

*****************

ಮಲೇಷ್ಯಾದ ಕೌಲಾಲಂಪುರದಲ್ಲಿಂದು ನಡೆಯುವ ಐಸಿಸಿ 19 ವರ್ಷದೊಳಗಿನವರ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್‌ನ ತನ್ನ ಮೊದಲ ಪಂದ್ಯದಲ್ಲಿ , ಹಾಲಿ ಚಾಂಪಿಯನ್ ಭಾರತ ತಂಡ ವೆಸ್ಟ್ ಇಂಡೀಸ್ ತಂಡದ ವಿರುದ್ಧ ಸೆಣಸಾಟ ನಡೆಸುತ್ತಿದೆ. ಟಾಸ್ ಗೆದ್ದ ಭಾರತದ ವನಿತೆಯರ ತಂಡ ಫಿಲ್ಡಿಂಗ್ ಆಯ್ದುಕೊಂಡಿದೆ.

ಬ್ಯಾಟಿಂಗ್ ಮಾಡುತ್ತಿರುವ ವೆಸ್ಟ್ ಇಂಡೀಸ್, ಇತ್ತೀಚಿನ ವರದಿ ಬಂದಾಗ 13.2 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 44 ರನ್ ಗಳಿಸಿದೆ. ಆ ಮೂಲಕ ಭಾರತಕ್ಕೆ ಗೆಲ್ಲಲು 45 ರನ್‌ಗಳ ಗುರಿ ನೀಡಿದೆ.

********ಮುಕ್ತಾಯ*********